ದಿನಾಂಕ: 04-02-2019ರ ಸೋಮವಾರದಂದು ಅಧಿಕೃತ ವಾರ್ಡ್ ಕಮಿಟಿ ಸದಸ್ಯರ ಸಭೆಯು ಬೆಳ್ಳಗೆ 10:00ಕ್ಕೆ ವಾರ್ಡ್ ಕಛೇರಿಯಲ್ಲಿ ಶ್ರೀಮತಿ ಶ್ವೇತ ವಿಜಯ್ ಕುಮಾರ್.ಹೆಚ್.ಆರ್ ಬಿಬಿಎಂಪಿ ಸದಸ್ಯರು ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ನಂ.85ರ ವಾರ್ಡ್ ಸಭಾ ನಡವಳಿಗಳು.

ಸಭೆಯಲ್ಲಿ ಉಪಸ್ಥಿತ ಸದಸ್ಯರು

| | | |
|---|---|---|
| 1 | ಶ್ರೀಮತಿ ಶ್ವೇತಾ ವಿಜಯ್ ಕುಮಾರ್.ಹೆಚ್.ಆರ್ | ಪಾಲಿಕೆ ಸದಸ್ಯರು ಹಾಗೂ ಅಧ್ಯಕ್ಷರು |
| 2 | ಶ್ರೀ ವಿಜಯ್‌ಕುಮಾರ್.ಆರ್.ಮಾನೆ | ಸದಸ್ಯರು |
| 3 | ಶ್ರೀಮತಿ ವಿದ್ಯಾ ಚೌದರಿ | ಸದಸ್ಯರು |
| 4 | ಶ್ರೀಮತಿ ಅನುರಾಧ ಗೋವಿಂದ್ | ಸದಸ್ಯರು |
| 5 | ಶ್ರೀಮತಿ ರೇಖಾ | ಸದಸ್ಯರು |
| 6 | ಶ್ರೀ ಹೆಚ್.ವೆಂಕಟೇಶ್ | ಸದಸ್ಯರು |
| 7 | ಶ್ರೀ ಕ್ಲಮೆಂಟ್ ಜಯಕುಮಾರ್ | ಸದಸ್ಯರು |
| 8 | ಶ್ರೀ ಹೂಡಿ ವಿಜಯ್ ಕುಮಾರ್ | ಸದಸ್ಯರು |
| 9 | ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ | ಕಾರ್ಯದರ್ಶಿ |

ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಇತರೆ

| | | |
|---|---|---|
| 1 | ಶ್ರೀ ಎಂ.ದೇವರಾಜ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 2 | ಶ್ರೀ ರಘುನಂದನ್ | ಕಿರಿಯ ಆರೋಗ್ಯ ಪರಿವೀಕ್ಷಕರು |

ಹಿಂದಿನ ಸಭಾ ನಡಾವಳಿಯನ್ನು ಓದಲಾಯಿತು. ಅದರಂತೆ ಈ ಕೆಳಗಿನಂತೆ ಚರ್ಚಿಸಲಾಯಿತು.

ಪೌರಕಾರ್ಮಿಕರ ಸಂಖ್ಯೆಗಳ ಬಗ್ಗೆ ಅಂತಿಮಗೊಳಿಸುವುದು.

ಪ್ರಸ್ತುತ ನಮ್ಮ ವಾರ್ಡಿನಲ್ಲಿ ಹೊಸ ಮೈಕ್ರೋ ಪ್ಲಾನ್ (ಅಕ್ಟೋಬರ್) ರಂತೆ 143 ಸಂಖ್ಯೆ ಪೌರಕಾರ್ಮಿಕರಿಗೆ ಸೀಮಿತಗೊಳಿಸಿದ್ದು, ಈಗಿನ ಹೊಸ ನಿಯಮಾವಳಿ ಪ್ರಕಾರ ಪ್ರತಿ ರಸ್ತೆಯ 700 ಮಿ. ಗೆ ಒಬ್ಬ ಪೌರಕಾರ್ಮಿಕರನ್ನು ನಿಗದಿಪಡಿಸಿದ್ದು ಇದರಂತೆ ಸದರಿ ವಾರ್ಡಗೆ 213 ಪೌರಕಾರ್ಮಿಕರ ಅವಶ್ಯಕತೆ ಇರುತ್ತದೆ, ಪ್ರಸ್ತುತ ವಾರ್ಡನಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ:121 ಆಗಿದ್ದು ಅವಶ್ಯಕತೆ ಇರುವ ಉಳಿದ 92 ಪೌರಕಾರ್ಮಿಕರನ್ನು ಅತ್ತಿ ಜರೂರಾಗಿ ನೇಮಿಸಿಕೊಳ್ಳುವಂತೆ ಸಭೆಯಲ್ಲಿ ಚರ್ಚಿಸಿ ಮಾನ್ಯ ಮಹಾ ನಗರ ಪಾಲಿಕೆ ಸದಸ್ಯರು ಹಾಗೂ ಅಧ್ಯಕ್ಷರು ಸದರಿ ಪೌರ ಕಾರ್ಮಿಕರನ್ನು ಹೆಚ್ಚಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮತ್ತು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

ಘನತ್ಯಾಜ ವಿಲೇವಾರಿಗಾಗಿ ನಿಗದಿಪಡಿಸಿರುವ ಜಾಗದ ಬಗ್ಗೆ

ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ವಾರ್ಡ್‌ಗಳಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ವಾರ್ಡ್ ಮಟ್ಟದಲ್ಲಿ ಖಾಲಿ ನಿವೇಶವನ್ನು ಗುರುತಿಸಿ ಘನ ತ್ಯಾಜ್ಯ ಸಂಸ್ಕರಣೆಗಾಗಿ (ಕಾಂಪೋಸ್ಟ್ ತಯಾರಿಕೆ, ಡಿ.ಡಬ್ಲ್ಯೂ.ಸಿ.ಸಿ. ಬಯೋ ಮಿಥೇನ್ ಪ್ಲಾಂಟ್, ಕಾಂಪೋಸ್ಟ್ ಪ್ಲಾಂಟ್ ಇತರೆ ) ನಿವೇಶನ ಗುರುತಿಸಿ ಯಾವುದೇ ಕಾರಣಕ್ಕೂ ಘನ ತ್ಯಾಜ್ಯವನ್ನು ಹೊರ ಸಾಗಿಸಲು ನಿರ್ಬಂಧಿಸಿ ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೆಳಗಿನಂತೆ ತೀರ್ಮಾನಿಸಲಾಯಿತು.

ಮು.ತಿ.ನೋ.....

Scanned by CamScanner

ಮಹದೇವಪುರ ವಲಯದ ವಾರ್ಡ್ ನಂ.೮೫ರಲ್ಲಿ ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆಗಳು ಆಗಿದ್ದು, ಸಂಸ್ಕರಣ ಘಟಕಗಳನ್ನು ನಿರ್ಮಿಸಲು ಸರ್ವೆ ನಂ.15ರ ಚಿನ್ನಪ್ಪನಹಳ್ಳಿ ಸರ್ಕಾರಿ ಜಾಗದಲ್ಲಿ ಅನುವುಮಾಡಲು ಹಾಗೂ ಸದರಿ ಜಾಗವನ್ನು ಬಿಬಿಎಂಪಿಗೆ ಹಸ್ತಾಂತರಿಸಲು ತಹಶೀಲ್ದಾರ್ ರವರಿಗೆ ಕೋರಿದ್ದು ಸದರಿ ಕಡತವು ಸಹಾಯಕ ದಂಡಾಧಿಕಾರಿಗಳ ಬಳಿ ಇದ್ದು ಮುಂದಿನ ದಿನಗಳಲ್ಲಿ ಸರ್ವೆ ನಂ.15ರ ಜಾಗವು ಬಿ.ಬಿ.ಎಂ.ಪಿ ಗೆ ಹಸ್ತಾಂತರ ಮಾಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಘನತ್ಯಾಜ ವಿಲೇವಾರಿಗಾಗಿ ನಿಗದಿಪಡಿಸಿರುವ ವಾಹನಗಳ ಬಗ್ಗೆ.**

ಪ್ರಸ್ತುತ ವಾರ್ಡಿನಲ್ಲಿ 33 ಆಟೋ ಟಿಪ್ಪರ್‌ಗಳು ಕಾರ್ಯ ನಿರ್ವಹಿಸುತ್ತಿದ್ದು ಸದರಿ ವಾರ್ಡಿನಲ್ಲಿ 33 ಸಾವಿರ ಮನೆಗಳಿದ್ದು ಪ್ರತಿ 700 ಮನೆಗಳಿಗೆ 1 ಆಟೋ ಟಿಪ್ಪರ್‌ಗಳಂತೆ 43 ಆಟೋ ಟಿಪ್ಪರ್‌ಗಳ ಅವಶ್ಯಕತೆಯಿದ್ದು ಉಳಿದ ಆಟೋ ಟಿಪ್ಪರ್‌ಗಳನ್ನು ಜರೂರಾಗಿ ಸರಬರಾಜು ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತ್ತು.

ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಪ್ರಸ್ತುತ ಟೆಂಡರ್ ಪ್ರಕ್ರಿಯೆ ಚಾಲ್ತಿಯಲಿದ್ದು ಸದರಿ ಟಿಂಡರ್ ಪ್ರಕ್ರಿಯೆಯಲ್ಲಿ 41 ಆಟೋ ಟಿಪ್ಪರ್ ಮತ್ತು 5 ಕಾಂಪ್ಯಾಕ್ಟರ್ ನಿಗದಿಪಡಿಸಲಾಗಿದೆ ಎಂದು ತಿಳಿಸಿರುತ್ತಾರೆ.

**ಟ್ರಾಫಿಕ್ ವಿಷಯದ ಬಗ್ಗೆ**

**ಎ.ಇ.ಸಿ.ಎಸ್ ಲೇಓಟ್ 60ಅಡಿ ರಸ್ತೆಯಲ್ಲಿ ಬರುವ ಮೋರಿಜ್ಞ್ ಹೋಟಲ್ ಹತ್ತಿರ ಒಂದು ಕಡೆ ಪಾರ್ಕಿಂಗ್ ಫೆಸಿಲಿಟಿ ಬಗ್ಗೆ ಟ್ರಾಫಿಕ್ ಪೋಲಿಸರಿಗೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತ್ತು. ಮುಂದಿನ ಸಭೆಗೆ ______ ಕೆ.ಇ.ಬಿ, ಬೆಸ್ಕಾಂ ಮತ್ತು ಪೋಲೀಸ್ ಇಲಾಖೆಯವರು ಸಭೆಗೆ ಹಾಜರಾಗಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

**60 ಅಡಿ ರಸ್ತೆಯಲ್ಲಿ ಪಾದಚಾರಿ ಮಾರ್ಗ ಮತ್ತು ಡಾಂಬರಿಕರಣ ಮಾಡಲು ಸಭೆಯಲ್ಲಿ ತೀಮಾನಿಸಲಾಯಿತ್ತು.**

ಕಾರ್ಯದರ್ಶಿ ಮತ್ತು ಸಂಚಾಲಕರು
ಸಹಾಯಕ ಅಭಿಯಂತರರು
ವಾರ್ಡ್ ನಂ.೮೫, ದೊಡ್ಡನೆಕ್ಕುಂದಿ

ಪಾಲಿಕೆ ಸದಸ್ಯರು ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.೮೫, ದೊಡ್ಡನೆಕ್ಕುಂದಿ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಘನ ತ್ಯಾಜ್ಯ ನಿರ್ವಹಣೆ
ಮಹದೇವಪುರ ವಲಯ.

Scanned by CamScanner